## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2105 (2381) |
| ಉತ್ತರಿಸಬೇಕಾದ ದಿನಾಂಕ | : | 27.03.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ವಿವಿಧ ಯೋಜನೆಗಳಡಿ ಕುಡಿಯುವ ನೀರಿನ ಮಾದರಿಗಳ ಪರೀಕ್ಷೆಯನ್ನು ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ಜಿಲ್ಲಾವಾರು ಮತ್ತು ವರ್ಷವಾರು ಪರೀಕ್ಷಿಸಲಾದ ಮಾದರಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿರುವ ಕುಡಿಯುವ ನೀರಿನ ಮೂಲಗಳ ಗುಣಮಟ್ಟದ ಪರೀಕ್ಷೆಗಳನ್ನು ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಳ್ಳಲಾಗಿರುತ್ತದೆ.<br>ಕಳೆದ ಮೂರು ವರ್ಷಗಳಲ್ಲಿ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಂಡಿರುವ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಪರೀಕ್ಷಿಸಲಾದ ಮಾದರಿಗಳಲ್ಲಿ ಎಷ್ಟು ಮಾದರಿಗಳು ಕಲುಷಿತಗೊಂಡಿರುವುದು ಕಂಡುಬಂದಿದೆ; ಇವುಗಳಲ್ಲಿ ಫ್ಲೋರೈಡ್ (Fluoride) ಆರ್ಸೆನಿಕ್ Arsenic), ಕಬ್ಬಿಣ ನೈಟ್ರೇಟ್ (Nitrate) ಮತ್ತು ಲವಣಾಂಶಗಳು (Salinity) ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆಯೇ; | ಪರೀಕ್ಷಿಸಲಾದ ಮಾದರಿಗಳಲ್ಲಿ 2023-24 ರಲ್ಲಿ 24917, 2024-25 ರಲ್ಲಿ 17261 ಮತ್ತು 2025-26 ರಲ್ಲಿ 12127 ನೀರಿನ ಮಾದರಿಗಳು ಕಲುಷಿತವೆಂದು ಕಂಡು ಬಂದಿರುತ್ತದೆ.<br>ಇವುಗಳಲ್ಲಿ ಕೆಲವು ಜನವಸತಿ ಪ್ರದೇಶಗಳಲ್ಲಿ ಕಬ್ಬಿಣ, ನೈಟ್ರೇಟ್ (Nitrate) ಮತ್ತು ಲವಣಾಂಶಗಳು (Salinity) ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. |
| ಇ) | ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕುಡಿಯುವ ನೀರು ಅತಿ ಹೆಚ್ಚು ಕಲುಷಿತಗೊಂಡಿದೆ ಎಂದು ಗುರುತಿಸಲಾಗಿದೆ; ಈ ಪೈಕಿ ಎಷ್ಟು ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದೆ: | ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |
| ಈ) | ಕಲುಷಿತ ನೀರು ಸರಬರಾಜು ಆಗುತ್ತಿರುವ ಪ್ರದೇಶಗಳಲ್ಲಿ ಸರ್ಕಾರವು ಕೈಗೊಂಡಿರುವ ಪರ್ಯಾಯ ಕ್ರಮಗಳೇನು; ನೀರಿನ | ಕುಡಿಯುವ ನೀರು ಕಲುಷಿತ ವೆಂದು ಕಂಡು ಬಂದಿರುವ ಪ್ರದೇಶಗಳಿಗೆ ಪ್ರಥಮ ಆದ್ಯತೆಯಾಗಿ ಆ ಗ್ರಾಮದಲ್ಲಿ ಅಥವಾ ಸುತ್ತಮುತ್ತಲು ಇರುವ |

| | | |
|---|---|---|
| | ಗುಣಮಟ್ಟವನ್ನು ಸುಧಾರಿಸಲು ಬಳಸಲಾದ ವಿಶೇಷ ಅನುದಾನದ ವಿವರಗಳೇನು; | ಪ್ರದೇಶಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಇದಲ್ಲದೆ ರಾಜ್ಯಾದ್ಯಂತ 18,000 ಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿರುತ್ತದೆ.<br><br>ಶಾಶ್ವತವಾಗಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವ ಮುನ್ನ ಮೇಲ್ಮೈ ನೀರು (Surface water) ಲಭ್ಯವಿರುವ ಕಡೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯಾದ್ಯಂತ ಸ್ಥಾಪಿಸಿರುವ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಯೋಗಾಲಯಗಳ ನಿರ್ವಹಣೆಗೆ ಕರ್ನಾಟಕ ಸರ್ಕಾರವು, ರಾಜ್ಯ ಪಾಲಿನ ಅನುದಾನವನ್ನು 2024-25 ನೇ ಸಾಲಿನಲ್ಲಿ 23.52 ಮತ್ತು ಪ್ರಸಕ್ತ ಸಾಲಿನಲ್ಲಿ ರೂ. 28.85 ಕೋಟಿ ರೂ.ಗಳನ್ನು ಸೇರಿ ಒಟ್ಟು ರೂ.52.37 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. |
| (ಉ) | ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಅಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನದಲ್ಲಿ ನೀರಿನ ಗುಣಮಟ್ಟ ಪರೀಕ್ಷೆಗಾಗಿ Water Quality Monitoring and Surveillance) ಮೀಸಲಿಟ್ಟ ಹಣ ಎಷ್ಟು ? | ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯನ್ವಯ ರಾಜ್ಯಕ್ಕೆ ಬಿಡುಗಡೆಯಾದ ಅನುದಾನದಲ್ಲಿ ಶೇ. 2 ರಷ್ಟು ಮೊತ್ತವನ್ನು ನೀರಿನ ಗುಣಮಟ್ಟ ಪರೀಕ್ಷೆಗಾಗಿ ವಿನಿಯೋಗಿಸಬಹುದಾಗಿದೆ. |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಳೆದ ಮೂರು ವರ್ಷಗಳಲ್ಲಿ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಂಡಿರುವ ವಿವರಗಳು

| ಕ್ರ.ಸಂ | ಜಿಲ್ಲೆಗಳು | 2023-24 ನೇ ಸಾಲಿನಲ್ಲಿ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಂಡಿರುವ ಸಂಖ್ಯೆಗಳು | 2024-2025ನೇ ಸಾಲಿನಲ್ಲಿ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಂಡಿರುವ ಸಂಖ್ಯೆಗಳು | 2025-2026ನೇ ಸಾಲಿನಲ್ಲಿ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಂಡಿರುವ ಸಂಖ್ಯೆಗಳು |
|---|---|---|---|---|
| 1 | ಬಾಗಲಕೋಟೆ | 9071 | 9920 | 8476 |
| 2 | ಬಳ್ಳಾರಿ | 6088 | 6645 | 4071 |
| 3 | ಬೆಳಗಾವಿ | 15450 | 16870 | 12284 |
| 4 | ಬೆಂಗಳೂರು ಗ್ರಾಮಾಂತರ | 2018 | 3968 | 5169 |
| 5 | ಬೆಂಗಳೂರು ನಗರ | 3408 | 3464 | 2872 |
| 6 | ಬೀದರ್ | 8290 | 9316 | 12102 |
| 7 | ಚಾಮರಾಜನಗರ | 8880 | 8232 | 7467 |
| 8 | ಚಿಕ್ಕಬಳ್ಳಾಪುರ | 10399 | 10384 | 6286 |
| 9 | ಚಿಕ್ಕಮಗಳೂರು | 9567 | 10222 | 7949 |
| 10 | ಚಿತ್ರದುರ್ಗ | 9273 | 10850 | 8896 |
| 11 | ದಕ್ಷಿಣ ಕನ್ನಡ | 9610 | 10106 | 9811 |
| 12 | ದಾವಣಗೆರೆ | 6145 | 6490 | 5345 |
| 13 | ಧಾರವಾಡ | 6524 | 6787 | 5295 |
| 14 | ಗದಗ | 3926 | 4903 | 3309 |
| 15 | ಹಾಸನ | 9268 | 9174 | 7318 |
| 16 | ಹಾವೇರಿ | 9820 | 9974 | 8520 |
| 17 | ಕಲಬುರ್ಗಿ | 9981 | 9775 | 7570 |
| 18 | ಕೊಡಗು | 5721 | 6732 | 5248 |
| 19 | ಕೋಲಾರ | 9642 | 9053 | 7978 |
| 20 | ಕೊಪ್ಪಳ | 8429 | 8998 | 5772 |
| 21 | ಮಂಡ್ಯ | 8450 | 9748 | 9407 |
| 22 | ಮೈಸೂರು | 9450 | 11284 | 6930 |
| 23 | ರಾಯಚೂರು | 9645 | 10699 | 7746 |
| 24 | ರಾಮನಗರ | 9257 | 9935 | 7703 |
| 25 | ಶಿವಮೊಗ್ಗ | 8987 | 9506 | 9418 |
| 26 | ತುಮಕೂರು | 9292 | 9316 | 6269 |
| 27 | ಉಡುಪಿ | 4125 | 5115 | 4382 |
| 28 | ಉತ್ತರ ಕನ್ನಡ | 12455 | 13181 | 12275 |
| 29 | ವಿಜಯನಗರ | 5854 | 6298 | 5362 |
| 30 | ವಿಜಯಪುರ | 5305 | 8679 | 7361 |
| 31 | ಯಾದಗಿರಿ | 7433 | 6542 | 5143 |
| ಒಟ್ಟು | | **251763** | **272166** | **223734** |

EIC
RDW & SD

ಅನುಬಂಧ-2

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಪ್ರಸಕ್ತ ಸಾಲಿನಲ್ಲಿ ನೀರಿನ ಮಾದರಿಗಳು ಕಲುಷಿತವೆಂದು ಕಂಡು ಬಂದಿರುವ ಗ್ರಾಮಗಳ ಮತ್ತು ಆ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಿರುವ ವಿವರಗಳು.

| ಕ್ರ.ಸಂ | ಜಿಲ್ಲೆಗಳು | ನೀರಿನ ಮಾದರಿಗಳು ಕಲುಷಿತವೆಂದು ಕಂಡುಬಂದಿರುವ ಗ್ರಾಮಗಳ ಸಂಖ್ಯೆ | ಸದರಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಿರುವ ಗ್ರಾಮಗಳ ವಿವರಗಳು |
|---|---|---|---|
| 1 | ಮಂಡ್ಯ | 423 | 281 |
| 2 | ಕೊಪ್ಪಳ | 387 | 326 |
| 3 | ತುಮಕೂರು | 387 | 300 |
| 4 | ವಿಜಯಪುರ | 375 | 284 |
| 5 | ಚಿತ್ರದುರ್ಗ | 324 | 258 |
| 6 | ಬೆಳಗಾವಿ | 274 | 258 |
| 7 | ಚಿಕ್ಕಬಳ್ಳಾಪುರ | 271 | 187 |
| 8 | ರಾಯಚೂರು | 255 | 224 |
| 9 | ಕೋಲಾರ | 206 | 176 |
| 10 | ಹಾವೇರಿ | 188 | 185 |
| 11 | ರಾಮನಗರ | 186 | 103 |
| 12 | ಬೀದರ್ | 178 | 86 |
| 13 | ಕಲಬುರ್ಗಿ | 171 | 54 |
| 14 | ಚಿಕ್ಕಮಗಳೂರು | 162 | 75 |
| 15 | ಮೈಸೂರು | 141 | 69 |
| 16 | ದಕ್ಷಿಣ ಕನ್ನಡ | 102 | 30 |
| 17 | ಬಳ್ಳಾರಿ | 96 | 93 |
| 18 | ಯಾದಗಿರಿ | 95 | 68 |
| 19 | ಬಾಗಲಕೋಟೆ | 92 | 89 |
| 20 | ಗದಗ | 72 | 72 |
| 21 | ದಾವಣಗೆರೆ | 59 | 58 |
| 22 | ಧಾರವಾಡ | 59 | 59 |
| 23 | ಚಾಮರಾಜನಗರ | 55 | 38 |
| 24 | ಉತ್ತರಕನ್ನಡ | 44 | 10 |
| 25 | ವಿಜಯನಗರ | 18 | 17 |
| 26 | ಕೊಡಗು | 13 | 6 |
| 27 | ಬೆಂಗಳೂರು ಗ್ರಾಮಾಂತರ | 12 | 12 |
| 28 | ಹಾಸನ | 10 | 4 |
| 29 | ಉಡುಪಿ | 8 | 2 |
| 30 | ಬೆಂಗಳೂರು ನಗರ | 7 | 7 |
| 31 | ಶಿವಮೊಗ್ಗ | 3 | 1 |
| | ಒಟ್ಟು | 4673 | 3432 |

EIC
RDW & S.